Report by the Hon'ble Speaker to the Assembly of His Highness the Maharaja's Reply to the Address.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—19ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರವರು ಈ ಸಭೆಯಲ್ಲಿ ಮಾಡಿದ ಭಾಷಣಕ್ಕೆ ವಂದನೆಗಳನ್ನು ಈ ಸಭೆಯ ಸದಸ್ಯರು ಕಳುಹಿಸಿದುದಕ್ಕೆ ಅವರು ಈ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ:

"To

The Members of the

Legislative Assembly.

"I have received with great satisfaction the expression of your thanks for the speech with which I opened the January Session, 1951 of the Legislative Assembly.

JAYACHAMARAJA WADIYAR,

Maharaja of Mysore."

Recommendation of His Highness the Rajpramukh for laying statement of Supplementary Estimats and the Schedule before the House.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—ಶ್ರೀಮನ್ಮಹಾರಾಜರವರು ಈಗ ಸಭೆಯ ಮುಂದೆ ಇಡಬೇಕಾಗಿರುವ ಸಪ್ಲಿಮೆಂಟರಿ ಗ್ರಾಂಟ್‌ಗಳಿಗೆ ತಮ್ಮ ಅನುಮತಿಯನ್ನು ಕೊಡುತ್ತಾ ಈ ರೀತಿ ಹೇಳಿದ್ದಾರೆ:

WHEREAS the amount authorised by the Mysore Appropriation Act, 1950 (Mysore Act of 1950) to be expended for the services indicated in the annexed statement for the current financial year is found to be insufficient for the purposes of the said year:

Now, therefore, in pursuance of clause (1) of article 205 of the Constitution of India, I, Sri Jaya Chamaraja Wadiyar, Rajpramukh of Mysore, do hereby direct that the statement* showing the estimated amount of supplementary expenditure aggregating the amount as indicated hereunder and detailed in the statement of estimate annexed, be laid before the January Session 1951 of the Legislative Assembly.

	Rs.
Expenditure met from Revenue...	91,12,015
Capital	26,09,000
Funds	8,19,750
Advance and Loans... ..	78,97,800
Total ...	2,04,38,565

JAYA CHAMARAJA WADIYAR,

Rajpramukh of Mysore.

Laying Statement of Additional and Supplementary Estimates and Schedule of Demands thereto.

Mr. SPEAKER (The Hon'ble Sri V. Venkatappa).—The Hon'ble Finance Minister will now lay the Statement of Additional and Supplementary Grants before the House.

The Hon'ble Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to lay before the House a statement* of additional and supplementary estimates and schedule of demands thereof, copies of which have already been distributed to the members.

LEGISLATIVE BUSINESS

Mr. SPEAKER (The Hon'ble Sri V. Venkatappa).—The Hon'ble Finance Minister will move that the Report of the Select Committee on the Mysore Sales-tax (Amendment) Bill, 1950, be taken into consideration.

The Mysore Sales-tax (Amendment) Bill, 1950.

Motion to consider.

The Hon'ble Sri H. C. DASAPPA (Minister for Finance and Industries).—Sir, I beg to move:

"That the Mysore Sales-tax (Amendment) Bill, 1950, as reported by the Select Committee, be taken into consideration."

In submitting the report of the Select Committee for consideration of this House, I would just make a few remarks. The House will remember that during the last session of the Assembly, the matter was referred to a Select Committee composed of Hon'ble Members, Sri H. B. Gundappa Gowda, Sri V. S. Narayana Rao, Sri W. H. Hanumanthappa, Sri Mahanthadevaru and myself. The Bill consists of two parts: one in respect of the question of reciprocity in the matter of supplying information to departments of the Centre. I used the word 'reciprocity'

*Statements and Schedule supplied to Members separately and laid on the table.

(THE HON'BLE SRI H. C. DASAPPA).

because the Centre have a similar clause in the Indian Income-tax Act where they have provided for the supply of information to the various State Governments which will later find it necessary for their purpose, the idea being to assess the relative incomes of assessees under the Indian Income-tax Act. I submit that occasions when information on reciprocal basis will have to be furnished by the State Government to the Centre are rare. Therefore, we have amended the clause as stated in the Select Committee Report. On this question, Sir, there was hardly any difference of opinion. Therefore sub-clause (3) of Section 24 which contains only one provision, is now sub-divided into two parts (*a*) and (*b*) and it is sub-clause (*b*) of Section 24 (3) that is a new clause, that is to say.

"Nothing in this Section shall apply to the disclosure of any of the particulars referred to in sub-section (1) to an officer of the Central Government as may be necessary for the purpose of enabling that Government to levy or realise any tax imposed by it."

Generally, matters that come within the knowledge and purview of either income-tax or sales tax departments are treated as confidential. But only in two cases there is an exception to the rule. First of course, is with reference to any criminal prosecution under the Indian Penal Code or under any criminal law. The second one is what I have just placed before the House, the question of reciprocity. So, I take it that there could be no objection to having this reciprocal clause.

The other point which was a matter of some controversy last time on the floor of this House which, I may say, necessitated a reference to the Select Committee was with reference to Section 22 of the Sales-tax Act. Section 22 reads as follows

"Save as provided in Section 16, no assessment made and no order passed under this Act or the Rules made thereunder by any assessing authority shall be called in question in any civil court and save as is provided in Sections 14 and 15, no appeal or application for revision shall lie against any such assessment or order."

Now, the whole structure of the Sales-tax is modelled on the Income-tax law. There is a separate provision for the purpose of affording relief to any assessee who may feel aggrieved by the levy. There is provision for an appeal under Section 14 for objecting to an assessment and under Section 15 there is provision for filing a revision petition Where there is any question of law, there is also provision under Section 16 for reference to the High Court itself, as in the case of income-tax. Now, sales-tax is in operation practically in all parts of the State. One of the difficulties in the working of this Act is about the collection of the taxes levied by the Assistant Sales-tax and Sales-tax officers. The Sales-tax Act provides, among other methods of collection, the collection of the tax by the method of prosecution also. That is done under Section 20.

"Any person who—

(*a*) wilfully submits an untrue return or fails to submit a return as required by the provisions of this Act or the rules made thereunder, or

(*b*) fails to pay within the time allowed, any tax assessed on him, or any fee due to him, under this Act, or

(*c*) prevents or obstructs inspection or entry by any officer authorised under Section 18, in contravention of the terms hereof, or

(d) fraudulently evades the payment of any tax assessed on him, or any fee due from him, under this Act..... ....."

Now, I want the Hon'ble Members to kindly bear in mind the two clauses under Section 20, *i.e.*, (*b*) and (*d*): (*b*) says, anybody who fails to pay within the time allowed and (*d*) is with reference to persons who fraudulently evade payment of any tax due from them. In such cases it becomes necessary to launch criminal prosecution for the recovery of the assessment. That may not unnecessarily create any scare for the obvious reason that that is one of the normal methods employed in the operation of such taxes.

The Sales-Tax Act already provides for prosecutions in such wilful evasion of taxes. I would beg the House to remember this fact that that clause could only come into operation in the case of tax dodgers and not in the case of honest people who are willing to pay their taxes. It has come within our experience that in the course of these prosecutions the people

who are hauled up before the Court could easily raise a plea either with regard to the basis of taxation or with regard to the quantum of taxation. As the provision stands at present in Section 22, all that is provided for is that nothing of a levy under these taxes can come within the purview of any Civil Court and that Civil Courts cannot therefore take jurisdiction over this question of levy and interfere with the levy made by the Department. Now it does not preclude the Criminal Court to go into the question of levy if perchance the person hauled up before that Court chooses to file an application saying that he is not bound to pay the particular amount. Therefore, it has become necessary for us to take it out of the purview of the Criminal Court. This question is gone into throughly by the Select Committee and the Select Committee has been pleased to submit an unanimous report in this matter. Madras also has a similar provision – Section 16-A in their Sales-Tax Act. That of course they found it necessary to introduce in the year 1947. Likewise, we from our experience have found it necessary that we must have it if that wholesome provision is not to be rendered infructuous or nugatory. The whole idea is that it is meant to be a salutary provision against, as I said, the regular tax dodgers. Unless the Government are armed with this power, it will be very difficult for them to recover the taxes from, I do not exactly remember the number; it will be somewhere about—40,000 assessees or so. It would mean, if we were to resort to the ordinary process of recovering the tax, the employment of a whole army of process servers and other officials necessary to recover this tax from 40,000 or 50,000 assessees. I have said just a few words in the beginning so that Hon'ble Members who are not on the Select Committee may appreciate what has motivated the Select Committee to submit this unanimous report with regard to both these points. All that I say is that, when anything is done under the Act and the Rules, those matters cannot be re-opend in a Criminal Court and be adjudicated upon. I do not say that the Criminal Court is not competent or anything like that, but by the very nature of things, the Magisterial work is far different from the one that might be necessitated if the Criminal Court has got to re-opend the entire accounts and go into the question of assessment. Secondly if, as I have said, the Government are not armed with this power, it would mean a whole hierarchy of process servers being set to recover the tax in almost every taluk. That would mean a colossal expenditure and loss of time also. I would therefore commend the report of the Select Committee for the acceptance of this House.

Mr. SPEAKER.—Motion moved :

"That the Mysore Sales-Tax (Amendment) Bill, 1950, as reported by the Select Committee, be taken into consideration."

ಜನಾಬ್ ಜೆ. ಮಹಮ್ಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆ—ಮುಸ್ಲಿಂ).—ಅಧ್ಯಕ್ಷರೆ, ಸೆಲೆಕ್ಟ್ ಸಮಿತಿಯಿಂದ ಬಂದಿರುವ ಈ ವರದಿಯನ್ನೂ ಮತ್ತು ಇದರ ಮೂಲ ಮಸೂದೆಯನ್ನೂ ಸಹ ನಾನು ಈಗ ವಿರೋಧಿಸಬೇಕಾಗಿದೆ. ಹಾಗೆ ಮಾಡತಕ್ಕದ್ದು ನನ್ನ ಕರ್ತವ್ಯ. ಹೋದ ಅಧಿವೇಶನದಲ್ಲಿ ಈ ಮಸೂದೆಯನ್ನು ಮಾನ್ಯ ಆರ್ಥಿಕ ಸಚಿವರು ಸಭೆಯ ಮುಂದೆ ಮಂಡಿಸಿದಾಗ ಇಲ್ಲಿ ಹಾಜರಿದ್ದ ಅನೇಕ ಮಾನ್ಯಸದಸ್ಯರು ಆಗಲೇ ಇದನ್ನು ವಿರೋಧಿಸಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದರು. ಅಷ್ಟೇ ಅಲ್ಲದೆ ಈ ಮಸೂದೆಯನ್ನು ಸಭೆಯ ಮುಂದೆ ತಂದನಂತರ, ಇದನ್ನು ಜಾರಿಗೆ ತಂದರೆ, ಮುಂದೆ ದೇಶದಲ್ಲಿ ಇದರ ಪರಿಣಾಮವೇನಾಗುತ್ತದೆ, ಇದರಿಂದ ಜನರಿಗೆ ಏನು ಕಷ್ಟನಷ್ಟಗಳು ಸಂಭವಿಸಲಿರುತ್ತವೆ ಎಂಬ ಬಗ್ಗೆ ಅನೇಕ ಖಾನಗೀ ಮಹನೀಯರೂ ಮತ್ತು ಗಣ್ಯ ವರ್ತಕಮಂಡಲಿಗಳವರೂ, ಈ ಸಭೆಯವರ ಗಮನಕ್ಕೆ ತಂದಿರುತ್ತಾರೆ. ಈ ಮಸೂದೆ ಪ್ರಥಮತಃ ಈ ಸಭೆಯ ಮುಂದೆ ಬಂದಾಗ ಇದನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸೋಣವಾಯ್ತು. ಆದರೆ ನಾನು ಬಹಳ ವಿಷಾದದಿಂದ ತಿಳಿಸಬೇಕಾಗಿದೆ, ಈ ಬಿಲ್ಲು ಸೆಲೆಕ್ಟ್ ಸಮಿತಿಯು ಪರಿಶೀಲನೆಗೆ ಹೋಗುವುದಕ್ಕೆ ಮುಂಚೆ ಯಾವ ರೀತಿಯಲ್ಲಿ ಮತ್ತು ಯಾವ ರೂಪದಲ್ಲಿತ್ತೋ, ಆ ಸಮಿತಿಯವರ ಪರಿಶೀಲನೆ ಮುಗಿದು ಈ ಸಭೆಯ ಮುಂದೆ ಬಂದಿರುವುದು ಅದೇ ರೂಪದಲ್ಲದೆ. ಹೇಗೆ ಅಲ್ಲಿಗೆ ಹೋಗಿತ್ತೋ ಹಾಗೆಯೇ ವಾಪಸ್ಸು ಬಂದಿರುತ್ತೆ. ಆದರೆ ನಾವೆಲ್ಲರೂ ಭಾವಿಸಿದ್ದೆವು, ಆ ಸಮಿತಿಯವರು ದೀರ್ಘವಾಗಿ ಆಲೋಚನೆಮಾಡಬಹುದು ಎಂದು. ಅವರು ಆಲೋಚನೆಮಾಡಿರಬಹುದು. ನಾನು ಆ ಸಮಿತಿಯಲ್ಲಿರಲಿಲ್ಲ. ಅವರು ಬಹಳ ಕಷ್ಟನಷ್ಟಮನ್ನೂ ಸಹ ಪಟ್ಟಿರಬಹುದು. ಆದರೆ ಪರಿಣಾಮದಲ್ಲಿ ಅವರು ಕಳುಹಿಸಿರತಕ್ಕ ವರದಿಯನ್ನು ನೋಡಿದರೆ ದೇಶಕ್ಕೆ ಅನುಕೂಲವಾಗಲು ಅದರಲ್ಲಿ ಎಷ್ಟೆಷ್ಟು ಅಂಶಗಳು ಮಾರ್ಪಡಾಗಬೇಕೆಂದು ಆಶಿಸಿರಾಗಿತ್ತೋ ಅವುಗಳೊಂದೂ ಆಗಿಲ್ಲವೆಂಬುದು ಖಚಿತವಾಗಿ ಗೊತ್ತಾಗುತ್ತಿದೆ.

Sri G. A. ACHARYA (Bangalore District General).—It is not true.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಅವರು ನನ್ನ ಆಪ್ತಮಿತ್ರರು. ಅನೇಕ ಸಂದರ್ಭಗಳಲ್ಲಿ ನನ್ನ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತಿದ್ದರು. ಇದನ್ನು ಮೊದಲು ಸರಿಕ್ಟ್ ನಮಿತಿಗೆ ಹಾಕಬೇಕೆಂದು ವಾದಿಸಿದವರು ಮಾನ್ಯ ಗಾಂಜಿ ಎರಪ್ಪನವರು. ಅವರಿಗೆ ವರ್ತಕರ ಕಷ್ಟ ಸುಖಗಳು ಚೆನ್ನಾಗಿ ಗೊತ್ತಿವೆ. ಇದರಲ್ಲಿ ಒಂದು ಮುಖ್ಯವಾದ ತತ್ವ ಏನು ಅಡಕವಾಗಿದೆ ಯೆಂದರೆ—ಒಬ್ಬ ಮನುಷ್ಯನು ಕ್ರಿಮಿನಲ್ ಕೋರ್ಟಿನ ಮುಂದೆ ವಿಚಾರಣೆಗೆ ಗುರಿಯಾಗಿರುವ ಕಾಲದಲ್ಲೂ ಮತ್ತು ತಾನು ಶಿಕ್ಷೆಗೊಳಗಾಗುವ ಸಂದರ್ಭದಲ್ಲಿ ತಾನು ನಿರ್ದೋಷಿ, ನಿರಪರಾಧಿ ಎಂದು ಸ್ಥಿರಪಡಿಸಲು ಅವನಿಗೆ ಎಲ್ಲಾ ಅವಕಾಶವಿರಬೇಕು. ವಾದಮಾಡಲೇ ಕೂಡದೆಂದೂ, ಅದಕ್ಕೆ ಅವಕಾಶವನ್ನೇ ಕೊಡಬಾರದೆಂದೂ, ಈ ಕಾನೂನಿನಲ್ಲಿ ಅಡಕಮಾಡಿರುವುದು ನ್ಯಾಯತತ್ವಕ್ಕೆ (ಜೂರಿಸ್ಪ್ರೂಡೆನ್ಸಿಗೆ) ಬಹಳ ವಿರೋಧವಾಗಿದೆ. ಖೂನಿ, ದರೋಡೆ ಅಥವಾ ಯಾವ ಚಿಕ್ಕ ದೊಂದು ಅಪರಾಧವನ್ನೇ ಮಾಡಿದ್ದಾನೆಂದು ಒಬ್ಬ ಮನುಷ್ಯನನ್ನು ಒಂದು ಚಾರ್ಜಿಗೆ ಗುರಿಪಡಿಸಿದ್ದಾಗ ಕಾನೂನು ರೀತ್ಯ ಅತನಿಗೆ ಎಲ್ಲಾ ಸೌಲಭ್ಯಗಳನ್ನೂ ನೀಡಬೇಕೆಂದೂ, ಅತನು ತಾನು ತಪ್ಪಿತಸ್ಥನಲ್ಲವೆಂದು ರುಜುವಾತುಕೊಡಲಚ್ಚಿಸಿದರೆ ಅದಕ್ಕೆಲ್ಲಾ ಅವಕಾಶ ಏಯಬೇಕೆಂದೂ ಶಾಸನದಲ್ಲೆ ವಿಧಾಯಕಮಾಡಿರಾಗಿದೆ.

ಇದೇ ರೀತಿಯಾಗಿ ಫಂಡಮೆಂಟಲ್ ರೈಟ್ಸ್‌ನಲ್ಲೂ ಕೂಡ ಹೇಳಿದೆ. ಯಾರನ್ನಾದರೂ ಶಿಕ್ಷಿಸಬೇಕಾದರೆ ನಿಷ್ಕಾರಣವಾಗಿ ಶಿಕ್ಷಿಸಕೂಡದು, ನ್ಯಾಯಸಮ್ಮತವಾಗಿಯೇ ಶಿಸ್ತನಬೇಕು, ಶಿಕ್ಷೆಗೆ ಗುರಿಮಾಡಲ್ಪಡುವವನಿಗೆ ಎಲ್ಲಾ ಅನುಕೂಲತೆ ಮತ್ತು ಸೌಲಭ್ಯವನ್ನೂ ಒದಗಿಸಬೇಕು, ಅವನು ತನ್ನ ಪರ ವಾದಿಸುವುದಕ್ಕೆ ಯಾವ ತರಹೆಯು ನಿರ್ಬಂಧವನ್ನೂ ಹಾಕಕೂಡದು ಎಂದು ತಿಳಿಸಿದೆ. ಇದು ಜ್ಯೂರಿಸ್‌ಪ್ರೂಡೆನ್ಸಿನ ಮೊದಲನೆಯ ತತ್ವ. ಅದು ಆ ರೀತಿಯಿರುವಾಗ ಈಗ ನಮ್ಮ ಅರ್ಥಿಕಸಚಿವರು ಈ ಮಸೂದೆಯನ್ನು ತಂದಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಪ್ರಜಾ ಸರ್ಕಾರವು ಜನರ ನೈತಿಕಮಟ್ಟ, ಅವರ ಸುಖಶಾಂತಿಗಳನ್ನು ಹೆಚ್ಚಿಸಬೇಕು. ಇಂತಹ ಮಸೂದೆಯು ಬಂದಿರುವುದು ಬಹಳ ವಿಷಾದಕರ. ಹಿಂದಿನ ಸರ್ಕಾರವು ಇಂಥ ಕ್ರಮವನ್ನು ಎಂದಿಗೂ ಅನುಸರಿಸಲಿಲ್ಲ. ಇಂಥಾದ್ದು ಈಗ ಬರಬಾರದು. ಈಗ ಮಾತಾಟ ತೆರಿಗೆ ಬಂದಿದೆ. ಒಬ್ಬ ಮನುಷ್ಯನು ಅದನ್ನು ಕೊಡದೇಹೋದರೆ ಆಗ ಇಲಾಖೆಯ ಇನ್‌ಸ್ಪೆಕ್ಟರು ಅಥವಾ ಅಸಿಸ್ಟೆಂಟ್ ಇನ್‌ಸ್ಪೆಕ್ಟರು ಅವನನ್ನು ತಗೆದುಕೊಂಡುಹೋಗಿ ಕೋರ್ಟಿನ ಮುಂದೆ ನಿಲ್ಲಿಸುವುದಕ್ಕೆ ಅಧಿಕಾರವಿವೆ. ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ ಅವನು ಇಷ್ಟು ತೆರಿಗೆ ಕೊಡಬೇಕು, ಕೊಡುತ್ತಿಲ್ಲ, ಆದ್ದರಿಂದ ಶಿಕ್ಷೆಮಾಡಿ ಎಂದು ಹೇಳಬಹುದು.

ಶ್ರೀ ಎಸ್ ರಂಗರಾಮಯ್ಯನವರು (ಬೆಂಗಳೂರು—ಪಶ್ಚಿಮ).—ತೆರಿಗೆ ಕೊಡದೇಹೋದರೆ ಏನುಮಾಡಬೇಕು?

ಜನಾಬ್ ಜೆ. ಮಹಮದ್ ಇಮಾಂರವರು.—ಹೇಳುತ್ತೇನೆ. ಈಗ ಜಮಾನು ಕಂದಾಯವಿದೆ. ಅದನ್ನು ಕೊಡದಿದ್ದರೆ ಏನು ಮಾಡುತ್ತೀರಿ! ನಾವೂ ಕೂಡ ದೇಶದ ಹಿತೈಷಿಗಳಾಗಿ ಹೇಳುತ್ತಿದ್ದೇವೆ. ಆದ್ದರಿಂದ ಸಾವಧಾನವಾಗಿ ನಾನು ಹೇಳುವುದನ್ನು ಪರ್ಯಾಲೋಚಿಸಿ ನೋಡಿ. ಇದು ಪ್ರತಿಪಕ್ಷದ ಧೋರಣೆಯೆಂದು ಹೇಳಬೇಡಿ. ಯೋಚನೆಮಾಡಿ ಅಭಿಪ್ರಾಯವನ್ನು ಕೊಡಿ. ಪ್ರತಿಯೊಬ್ಬರ ಅಭಿಪ್ರಾಯಕ್ಕೂ ಮನ್ನಣೆ ಕೊಡಬೇಕು. I am not a person who will oppose for the sake of opposition, or criticise for the sake of criticism. When I feel that a wrong step has been taken by the Government it is my humble duty to point it out and bring it to their notice. My friends ask, supposing a person does not pay the tax or evades payment, what is the remedy? Well, there are so many recourses by which payment may be effected. For example, in respect of recovery of Land Revenue arrears, you do not go to Court and prosecute him for default. In respect of revenue arrears and Panchayat dues there are ways of enforcing collection of the dues. Such provisions are not found here.

The Hon'ble Sri H. C. DASAPPA.—May I just rise to a point of order? The issue is not whether a criminal prosecution lies or not. I am afraid my Hon'ble friend was not quite alert at the time when the Sales-Tax Act itself came up for discussion before the House. The Act already provides for prosecution. The question now is whether he should be allowed to reopen the entire proceedings and question the levy itself. That is the point. So it is no use my friend trying to assert that prosecution should not lie and there are other ways of recovering the dues.

Janab J. MOHAMED IMAM—I am only putting forward these arguments in reply to certain points raised by my other friends.

So there are other remedies under the Law. As I said it is the fundamental right of every citizen that when he is hauled up before a Court of Justice where his honour is at stake and his future is involved, he should be afforded every scope to prove his innocence. Just take Section 20 of the Sales-Tax Act where there are various clauses under which prosecution is contemplated as, for submitting untrue returns, for wilful delays in submission etc. Now, who is the authority to assess or find out if a person is wilfully evading submiss on of returns or submitting false returns? Who is the person who has got to say that a merchant has failed to pay sales-tax? I say it is the Court and certainly not the Departmental Officer. Supposing a Sales-Tax Officer files prosecution before the Court stating

that a person has submitted a false return and the assessor says that he filed a true return. According to this amendment, the assessee or the accused cannot plead anything at all in the Court of Law, because the Sales-Tax Officer's assessment becomes final and cannot be questioned. So, when an assessee is brought before the Court, he has absolutely no defence for himself, because whatever the Sales-Tax Officer does, the Magistrate must accept it as correct and the next step is only conviction.

That is very unfair and it is against all cannons of law. This will keep the assessee at the discretion of the departmental officers It may be argued for the Government that the assessee has got the right of appeal. To whom? It is only to the Departmental officers or at the most, on a point of law, to the High Court. Civil remedy is quite different from that by criminal prosecution. In these circumstances, I submit that this amendment is highly retrograde one and it ought not to be accepted. It deprives a person of his fundamental right to plead and put forward his defence. In the Department, even the smallest officer is given all powers. He will be all in all and whatever he says will have to be accepted by the magistrate and the magistrate in the court will be quite helpless. When the assessee is deprived of his right of pleading, what else can he say in the court of law? Therefore I say that this will be a very unfair measure. An attempt may be made to justify this measure on the ground that a similar provision exists in the Income-tax Act. But the Income-tax Act is quite different; the Department is a long-established department and that case is quite different. Even there, I am not quite sure whether such a provision exists. Even granting that such a provision exists in that Act, it is not a justification and that cannot be compared with the Sales-Tax Act. The Sales-Tax Act stands by itself. As I said, it is a nuisance tax, but still we have to undergo these difficulties because the finances of the country require it. But to compare it with Income-Tax Act is not good. Another reason is adduced saying that such provision exists in the Bombay and Madras Acts. A few days ago, I heard over the All-India Radio that Sales-tax is going to become a Central subject. It was an authoritative announcement from the All-India Radio which is under the Government of India. I very much feel that this subject will be taken over by the Centre at no distant date. The Central Government would then like to follow a uniform policy for all the States. I therefore feel that there is no need to rush through this legislation. I submit to the Government, let them not be in a hurry. Sir, now-a-days I have noticed a tendency to legislate too much. There is a great anxiety on the part of the Government to introduce a series of legislative measures, good or bad. How many legislative measures we are having now, as against one or two in the past? Let us go slowly. Let us see whether the Centre is going to take over the Department. Afterwards we can do as necessity demands. For these reasons I feel it my duty to oppose.

Sri G. VEERAPPA (Chitaldrug District—General).—Sir, the very first reaction to the Bill, as my learned friend Janab Imam has put it, was that it will take away a fundamental right, namely, the right to defend himself in a court of law when a prosecution is launched against an assessee. It is no doubt to some extent true that certain rights of an assessee will be taken away. But we have to examine this question from several points of view, namely, from the point of view of Government collecting the tax: whether there will be unnecessary obstacles placed in the way by the assessees, simply because there is a provision of law that they can defend in the court, whether the assessee will not make use of the same to evade or delay the collection of the tax, will also have to be considered. Because if an assessee thinks that a remedy is open to him by way of a plea of this kind, nobody will be willing to pay taxes easily. If there is an opportunity for him to take up some plea of law, he will surely wait till the prosecution is launched and then

(SRI G VEERAPPA).—

the matter is fought out even up to the High Court. From that point of view, if there is no provision of this nature, it may affect Government collecting Sales-Tax. But all the same, I submit that it was a bit alarming to me when I first saw the Bill taking away such an important right and felt that an assessee will be left helpless in a court. But as the Hon'ble Finance Minister explained, there is a remedy open. There is a first appeal to the Sale-Tax Officer, then to the Deputy Commissioner of Sales-Tax, then to the Commissioner and then, if there is any intricate question of law, there is provision that the matter can be referred to the High Court which can of course go into the matter in detail and give relief. That apart, under Section 22 it is provided :—

"Save as provided in Section 16, no assessment made and no order passed under this Act or the rules made thereunder by any assessing authority shall be called in question in any Civil Court, and save as is provided in Sections 14 and 15, no appeal or application for revision shall lie against any such assessment or order."

So, even the omission of the word 'civil' will of course take away the right of criminal courts to go into this question. Whenever there is any prosecution, he cannot put forward any plea at all. If he feels that an order was not made under the provisions of the Sales-Tax Act or the rules made thereunder, certainly he can say that it is not an order in accordance with the provisions of the Sales-Tax Act. He can still take cover under the Sales-Tax Act, because the language of the Section is :—

"..... no order passed under this Act or rules made thereunder shall be called into question."

If he says it is not an order under this Act or under the rules thereunder, this plea is still open to him. He can challenge the order. So it does not totally take away the right of the assessee from defending his case in prosecution. So after a closer examination of the provisions I was convinced that it does not amount to taking away the right he has got. To some extent it does, but it is in the interest of the collection of the tax by Government. What Janab Imam said struck me in the beginning and I immediately sent in an amendment also. But after a closer examination, I was convinced that a remedy was still open to him to say that it is not under this Act or under the Rules thereunder.

SRI L. SIDDAPPA (Shimoga District—General).—You are a recent convert!

SRI G. VEERAPPA.—You can become a convert at any stage, if you feel like that after a closer consideration of the matter. I think the assessee is not deprived of any remedy. I therefore support the Bill.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ಒಬ್ಬನ ಮೇಲೆ ಕ್ರಿಮಿನಲ್ ಕೋರ್ಟ್ ನಲ್ಲಿ ಮೊಖದ್ದಮೆ ಹೂಡಿದರೆ ಅಲ್ಲಿ ಅವನು ರಕ್ಷಣೆ ಮಾಡಿಕೊಳ್ಳತಕ್ಕದ್ದು ಮೂಲಭೂತ ಹಕ್ಕೆಂದು ಜನಾಬ್ ಇಮಾಂರವರು ಹೇಳಿದರು. ಮೂಲಭೂತಹಕ್ಕೆಂದರೆ, ಯಾರನ್ನಾದರೂ ಶಿಕ್ಷೆ ಮಾಡಬೇಕಾದರೆ ಕಾನೂನು ಪ್ರಕಾರ ಮಾಡಬೇಕೇ ಹೊರತು ಕಾನೂನು ಬಿಟ್ಟು ಶಿಕ್ಷೆ ಮಾಡಬಾರದು ಎಂಬುದೆಂದು ನಾನು ತಿಳಿದುಕೊಂಡಿದ್ದೇನೆ. ಈ ತಿದ್ದುಪಡಿಯನ್ನು ತಂದಿರುವುದು ಮಾರಾಟ ತೆರಿಗೆ ಕೊಡದೇ ಹೋದಾಗ ಅಂತಹ ತಪ್ಪಿಸ್ಥನ ಮೇಲೆ ಕ್ರಿಮಿನಲ್ ಕೋರ್ಟ್‌ನಲ್ಲಿ ಮೊಖದ್ದಮೆ ಹೂಡಿ ಶಿಕ್ಷೆಗೆ ಒಳ ಮಾಡಿಸುವ ಉದ್ದೇಶದಿಂದ ಹಾಗೆ ಶಿಕ್ಷೆ ಮಾಡುವಾಗ, ಮಾರಾಟ ತೆರಿಗೆ ಕಾನೂನಿನ ರೀತಿ ಯಾವ ತೆರಿಗೆಯನ್ನು ಅದರಲ್ಲಿ ವಿಧಿಸಿರುತ್ತಾರೋ ಅದನ್ನೇ ಸರಿಯಲ್ಲವೆಂದು ಹೇಳಿ ಪುನಃ ವಾದ ಹೂಡುವುದಕ್ಕೆ ಅವಕಾಶವಿರಬಾರದೆಂಬ ಉದ್ದೇಶದಿಂದ ಇದನ್ನು ತಂದಿರುವುದು. ಮಾರಾಟ ತೆರಿಗೆ ಕಾನೂನಿನಲ್ಲಿ ವಿಧಿಸಿರುವ ಕಂದಾಯ ಸರಿಯಲ್ಲದಿದ್ದರೆ ನ್ಯಾಯ ದೊರಕಿಸಿಕೊಳ್ಳಲು ಅವಕಾಶವಿದೆ. ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಸೇಲ್ಸ್ ಟ್ಯಾಕ್ಸ್ ಸರಿಯಾಗಿ ನಿರ್ದಿಷ್ಟ ಮಾಡದೆ ವಿಧಿಸಿದರೆ, ಅದರ ಮೇಲೆ ಸೇಲ್ಸ್ ಟ್ಯಾಕ್ಸ್ ಡೆಪ್ಯುಟಿ ಕಮೀಷನರಲ್ಲಿ ಅಪೀಲು ಹಾಕಲು ಅವಕಾಶ ಎದೆ. ಅಲ್ಲಿಯೂ ಸರಿಯಾದ ತೀರ್ಮಾನ ದೊರೆಯಲಲ್ಲವೆಂದು ತೋರಿದರೆ ಸೇಲ್ಸ್ ಟ್ಯಾಕ್ಸ್ ಕಮೀಷನರ ಮುಂದೆ ಅಪೀಲ್ ಹೋಗಲು ಅವಕಾಶವಿದೆ. ಅಲ್ಲಿಯೂ ನ್ಯಾಯ ದೊರೆಯಲಲ್ಲವೆಂದು ತೋರಿದರೆ ಸರ್ಕಾರದಲ್ಲಿ revision ಮೂಲಕ ತೀರ್ಮಾನ ಪಡೆಯುವುದಕ್ಕೆ ಅವಕಾಶವಿದೆ. ಅಲ್ಲಿಯೂ ಸರಿಯಾದ ತೀರ್ಮಾನ ದೊರೆಯದೆ, ಕಾನೂನು ಪ್ರಕಾರ ತೆರಿಗೆಯನ್ನು ವಿಧಿಸಿಲ್ಲವೆಂದು ಕಂಡುಬಂದು, ಅಪೀಲುದಾರನಿಗೆ ಅತೃಪ್ತಿಯಿದ್ದರೆ ಹೈಕೋರ್ಟಿನಲ್ಲಿ ಹೋಗಿ ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದೆ.

ಇಷ್ಟೆಲ್ಲಾ ಆಗಿ ಒಂದು ವರ್ಷ, ಎರಡು ವರ್ಷ ಕ್ರಮ ನಡೆದು ಕೊನೆಯಲ್ಲಿ ಇಷ್ಟೇ ಸೇಲ್ಸ್ ಟ್ಯಾಕ್ಸ್ ಕೊಡಬೇಕು ಎಂದು ನಿರ್ಧಾರ ಮಾಡಿದ ಮೇಲೂ ಕೊಡದೆ ಬಂಡರಾದವರಿಗೆ ಏನು ಮಾಡಬೇಕು ಎಂಬುದು ಒಂದು ಪ್ರಶ್ನೆ. ಸೇಲ್ಸ್ ಟ್ಯಾಕ್ಸ್ ವಸೂಲು ಮಾಡಿಕೊಳ್ಳುವುದರಲ್ಲಿ ಅನೇಕ ಕ್ರಮಗಳಿದ್ದರೂ ಕೂಡ, ಕ್ರಿಮಿನಲ್ ಕೋರ್ಟ್‌ಗೆ ಹೋಗಿ ಸೇಲ್ಸ್ ಟ್ಯಾಕ್ಸ್ ಕೊಡದೆ ಇರುವ ಆಸಾಮಿಯ ಮೇಲೆ ಕೇಸು ಹಾಕಿದರೆ ಅಲ್ಲಿ ಟ್ಯಾಕ್ಸ್ ವಿಧಿಸಿರುವುದು ಸರಿಯಾಗಿಲ್ಲ ಎಂದು ವಾದ

ಹೂಡಿದ ಪಕ್ಷದಲ್ಲಿ ಯಥಾಪ್ರಕಾರ ಮೊದಲಿನಿಂದ ಕೊನೆಯವರೆಗೂ ಸೇರ್ಸ್ ಟ್ಯಾಕ್ಸ್ ಇರಾಜಿಯವರು ತಮ್ಮ ಕಡತ ತೆಗೆದುಕೊಂಡು ಹೋಗಿ ರುಜುವಾತು ಮಾಡಬೇಕಾಗುತ್ತದೆ. ಹೀಗೇನಾದರೂ ಅವಕಾಶ ಎದ್ದರೆ ಕ್ರಿಮಿನಲ್ ಕೋರ್ಟಿನಲ್ಲಿ ಮೊಕದ್ದಮೆ ಹೂಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಮೊಕದ್ದಮೆ ಹೂಡಿದರೆ ಸಂಪೂರ್ಣ ರುಜುವಾತು ಕೊಡಬೇಕಾಗುತ್ತದೆ. ಡೆಪ್ಯೂಟಿ ಕಮೀಷನರ ಮುಂದೆ, ಸಾಕ್ಯಾರವ ಮುಂದೆ ಯಾವುದು ನ್ಯಾಯ ಎಂದು ಆಗುತ್ತದೆಯೋ ಅವನ್ನೇ ಪುನಃ ಇಲ್ಲಿ ಇನ್ನೊಂದು ಸಾರಿ ರುಜುವಾತು ಮಾಡಬೇಕಾಗುತ್ತದೆ. ಹೀಗೆ ಮಾಡುವುದರಿಂದ ಮಾನ್ಯ ಸಚಿವರು ಹೇಳಿದ ಹಾಗೆ ಸುಮಾರು 40-50 ಸಾವಿರ assesees ಇರುವ ಕಡೆ ಪ್ರತಿಯೊಂದು ಮೊಕದ್ದಮೆಗೂ ರುಜುವಾತು ಮಾಡಬೇಕೆಂದರೆ ಸರ್ಕಾರದವರಿಗೆ ಬರುವ ಉತ್ಪತ್ತಿಯಲ್ಲಿ ಬಹು ಭಾಗವನ್ನು ಈ ಕೇಸು ನಡೆಸುವುದಕ್ಕೇ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಇದು ಸಾಧುವಾದದ್ದಲ್ಲ. ಕ್ರಿಮಿನಲ್ ಕೋರ್ಟ್ ನಲ್ಲಿ ಮೊಕದ್ದಮೆ ಹೂಡಿದಾಗ ಪುನಃ ವಾದಿಸುವುದಕ್ಕೆ ಅವಕಾಶ ಕೊಡದೇ ಇದ್ದರೆ ಸುಲಭವಾಗಿ ವಸೂಲು ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಜನಾಬ್ ಇಮಾಂಪಟ್ಟು ಭೂಕಂದಾಯ ವಸೂಲು ಮಾಡುವಾಗ, ಮನೆ ಕಂದಾಯ ವಸೂಲು ಮಾಡುವಾಗ ಈ ರೀತಿ ಕ್ರಿಮಿನಲ್ ಕೋರ್ಟ್ ನಲ್ಲಿ ಕೇಸು ಹಾಕುವುದಿಲ್ಲ ಎಂದು ಹೇಳಿದರು. ಅದು ನಿಜ. ಅದಕ್ಕೂ ಇದಕ್ಕೂ ಒಂದು ವ್ಯತ್ಯಾಸ ಇದೆ. ಅಲ್ಲಿ ಜಪ್ತಿ ಮಾಡಿಸಿಕೊಳ್ಳಬಹುದು. ಅದು ಎಲ್ಲೂ ಓಡಿಹೋಗುವುದಿಲ್ಲ. ಹಳ್ಳಿಗಳಲ್ಲಾಗಲೀ, ಪಟ್ಟಣಗಳಲ್ಲಾಗಲೀ ಮನೆಗಳು ಇರುತ್ತವೆ. ಆದ್ದರಿಂದ ಅವುಗಳ ವಿಷಯದಲ್ಲೂ ಯಾವ ಭಯವೂ ಇಲ್ಲ. ಅವುಗಳ ಮೇಲೆ ಫಸ್ಟ್‌ಚಾರ್ಜ್ ಮಾಡಿ ಕಂದಾಯ ಕೊಡದೇ ಇದ್ದರೆ ವಸೂಲು ಮಾಡಿಕೊಳ್ಳುವುದಕ್ಕೆ ಒಂದು ರಹದಿ ಇದೆ. ಆದರೆ ಇಲ್ಲಿ ನಮ್ಮ ತಿಳಿವಳಿಕೆಗೆ ಬಂದ ಹಾಗೆ ಅನೇಕ ವ್ಯಾಪಾರಸ್ಥರು ಇರುತ್ತಾರೆ, ಸೇರ್ಸ್ ಟ್ಯಾಕ್ಸು ಕೊಡುತ್ತಾರೆ. ಬಹಳ ಜನ ಸರಿಯಾಗಿ ಕೊಡುತ್ತಾರೆ. ಆದರೆ ಒಬ್ಬಿಬ್ಬರು ತಪ್ಪಿಸಿಕೊಂಡು ಹೋಗಬಹುದು. ಇವತ್ತು ಅಂಗಡಿ ತಮ್ಮದಾಗಿರುತ್ತದೆ, ಮಾರನೆ ದಿನ ಇನ್ನೊಬ್ಬರಿಗೆ ಏರೇ ಮಾಡಬಹುದು. ಆಗ ನಿರ್ದಿಷ್ಟವಾದ ಒಂದು ರಹದಿ ಇರುವುದಿಲ್ಲ. ಅಂತಹವರಿಂದ ಸೇರ್ಸ್ ಟ್ಯಾಕ್ಸ್ ವಸೂಲು ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟ ಆಸಾಮಿಯ ಮೇಲೆ ಕ್ರಿಮಿನಲ್ ಕೋರ್ಟ್ ನಲ್ಲಿ ಕೇಸು ಹಾಕಬೇಕೇ ಏನಃ ಬಾಕಿ ಕಂದಾಯಗಳ ವಸೂಲು ಕ್ರಮದಂತೆ ಹೋದ್ದರೆ ಬರುವುದಿಲ್ಲ. ಆದ್ದರಿಂದ ವರಮಾನದ ತೆರಿಗೆಗೂ, ವ್ಯಾಪಾರದ ತೆರಿಗೆಗೂ ವ್ಯತ್ಯಾಸವಿದೆ. ಜನಾಬ್ ಇಮಾಂರವರು ವರಮಾನದ ತೆರಿಗೆಗೂ, ವ್ಯಾಪಾರದ ತೆರಿಗೆಗೂ ವ್ಯತ್ಯಾಸವಿದೆ ಎಂದು ಹೇಳಿದರೇ ಏನಃ ನಿರ್ದಿಷ್ಟವಾಗಿ ಯಾವ ವ್ಯತ್ಯಾಸವನ್ನೂ ಸೂಚಿಸಲಿಲ್ಲ. ಒಂದೇ ಒಂದು ವ್ಯತ್ಯಾಸ ಹೇಳಿದರು, ಅದು ಬಹಳ ಹಳೇ ಕಂದಾಯ, ಇದು ಬಹಳ ಹೊಸ ಕಂದಾಯ ಎಂಬುದನ್ನು ಮಾತ್ರ ಸೂಚಿಸಿದರು. ಈ ಒಂದೇ ಒಂದು ವ್ಯತ್ಯಾಸವಾಗುವುದಾದರೆ ಇಂಥಾ ಕಂದಾಯವನ್ನು ವಿಧಿಸಿದಾಗ ಕ್ರಿಮಿನಲ್ ಕೋರ್ಟ್ ನಲ್ಲಿ ಮೊಕದ್ದಮೆ ಹೂಡಿದ ಸಂದರ್ಭದಲ್ಲಿ ವಾದ ಮಾಡುವುದಕ್ಕೆ ಅವಕಾಶ ಕೊಡದಿರುವುದು ಸೂಕ್ತವೆಂದು ಹೇಳಿ ಈಗ ತಂದಿರುವ ತಿದ್ದುಪಡಿಯನ್ನು ಸಭೆಯವರು ಒಪ್ಪಬೇಕೆಂದು ಹೇಳುತ್ತೇನೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಜನಾಬ್ ಇಮಾಂರವರು ಸೆರೆಕ್ಟ್ ಸಮಿತಿಯ ವಿಚಾರವಾಗಿ ಮಾತನಾಡುತ್ತಾ ಸಮಿತಿಯವರು ಕೆಲವು ವಿಷಯಗಳನ್ನು ಆರೋಪಣೆ ಮಾಡದೇ ಇರಬಹುದು ಎಂದು ಹೇಳಿದರು. ನಾನೂ ಒಬ್ಬ ಆ ಸಮಿತಿಯ ಸದಸ್ಯ. ಆ ರೀತಿ ಯೋಚನೆ ಮಾಡದೇ ಇರುವ ಹೊಸ ಅಂಶ ಯಾವುದು ಎಂದು ನನಗೆ ಯೋಚನೆ ಆಯಿತು. ಅದೂ ಅಲ್ಲದೆ ಮೊದಲನೆಯದಾಗಿ ಮೂಲ ಭೂತ ಹಕ್ಕಿಗೆ ಸಂಬಂಧಪಟ್ಟ ವಿಷಯ ಎಂತದೂ ಹೇಳಿದರು. ಅದು ಸ್ವಲ್ಪ ದೊಡ್ಡ ವಿಷಯ. ಮೂಲಭೂತ ಹಕ್ಕು ಎಂದರೆ ಯಾರಾದರೂ ತರೆಬಾಗಬೇಕಾಗುತ್ತದೆ. ಆದರೂ ಅವರು ಹೇಳಿರುವ ವಿಷಯದಲ್ಲಿ ಮೂಲಭೂತ ಹಕ್ಕಿಗೆ ಸಂಬಂಧಪಟ್ಟಂತೆ ಅವರಿಗೆ ಒತ್ತಾಸೆ ಸಿಕ್ಕುವ ಹಾಗಿಲ್ಲ.

Janab J. MOHAMED IMAM.—That will be against the fundamental rights provided for in the constitution.

The Hon'ble Sri K. CHENGALARAYA REDDY (Chief Minister).—If that is the Hon'ble Member's interpretation of the fundamental rights, there can be no control; there can be no regulation; there can be nothing of the kind. Every one will have absolute licence to do what he pleases.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಾನು ಹೇಳುವುದು ಇಷ್ಟೆ. ಮೂಲಭೂತ ಹಕ್ಕು ಎಂದರೆ ಕೊಲೆ ಪಾತಕನಿಗೂ ಸಹ ಒಂದು..... .....

Janab J. MOHAMED IMAM.—Lawyers always differ.

ಶ್ರೀ ಎಚ್. ಬಿ ಗುಂಡಪ್ಪಗೌಡರು.—ಪ್ರೊಸೀಜರ್ ವಿಚಾರದಲ್ಲಿ ಯಾರೂ ಭಿನ್ನಾಭಿಪ್ರಾಯ ಪಡುವುದಿಲ್ಲ. ಏಕೆಂದರೆ ಖುನಿ ಮಾಡಿದವರಿಗೂ ಕೂಡ ಒಂದು ನಿಯಮ ಏರ್ಪಡಿಸಿದ್ದಾರೆ. ಅವರೂ ಕೂಡ ಡಿಫೆಂಡ್ ಮಾಡಿಕೊಳ್ಳಬಹುದು. ಆದ್ದರಿಂದ ಯಾವ ವಿಚಾರದಲ್ಲೇ ಆಗಲೀ ಕಾನೂನು ಪ್ರಕಾರ ನಾವು ಮುಂದೆ ಹೋಗಬಹುದು, ಕಾರ್ಯಕ್ರಮ ತೆಗೆದುಕೊಳ್ಳಬಹುದು. ಕಾನೂನಿನಿಂದ ಅಂತ ಒಂದು ಅಧಿಕಾರ ಬರುತ್ತದೆ. ಜನಾಬ್ ಇಮಾಂರವರು ಈ ಮೂರೊಡೆಯನ್ನು ವಾಪಸು ತೆಗೆದುಕೊಳ್ಳಿ ಎಂದು ಹೇಳಿದರು. ನಾವು ಈಗ ಸೆರೆಕ್ಟ್ ಸಮಿತಿಯ ವರದಿಯನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ. ಮತ್ತು ಮೂಸೂದೆಯ ತತ್ವವನ್ನು ಆಗಲೇ ಒಪ್ಪಿಕೊಂಡಿದ್ದು ಆಗಿದೆ. ಆದ್ದರಿಂದ ಈಗ ಈ ಮೂಸೂವೆಯನ್ನು ವಾಪಸ್ಸು ತೆಗೆದುಕೊಳ್ಳುವ ಸಮಾಚಾರ ಬರುವುದೇ ಇಲ್ಲ. ಸೆರೆಕ್ಟ್ ಸಮಿತಿಯ ವರದಿಯನ್ನು ಅಂಗೀಕಾರ ಮಾಡುತ್ತಾರೆಯೇ, ಇಲ್ಲವೇ ಎಂಬುದು ಅಷ್ಟೇ ಈಗಿರುವ ಪ್ರಶ್ನೆ. ಆದ್ದರಿಂದ ಅವರು ಆ ನಿಲುವನ್ನು ತೆಗೆದುಕೊಳ್ಳುವುದು ಸರಿಯಲ್ಲ.

ಇನ್ನು ಕ್ರಿಮಿನಲ್ ಕೋರ್ಟಿಗೆ ಹೋಗಿ ತೀರ್ಪು ಕೊಡುತ್ತಾರೆ ಎಂಬ ವಿಷಯವನ್ನು ಆರೋಪಿಸುವಾಗ ಒಂದು ಅಂಶವನ್ನು ತಿಳಿದುಕೊಳ್ಳಬೇಕು. ಅನೇಕ ಜನರು ವ್ಯಾಪಾರ ತೆರಿಗೆಯನ್ನು ಕೊಡದೇ ನುಂಗಿಹಾಕಿದ್ದಾರೆ. ಸಿವಿಲ್ ಕೋರ್ಟು ಜ್ಯೂರಿಸ್ ಡಿಕ್ಷ್ ತೆಗೆದು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹಾಕಬೇಕೆಂದರೆ ಒಂದು ಕಷ್ಟ ಇದೆ. ವರಮಾನದ ತೆರಿಗೆ ವಿಚಾರದಲ್ಲಿ ವ್ಯಾಪಾರ ಮಾಡುವವರ ವರಮಾನ ಯಾವುದೋ ಒಂದು ಗೊತ್ತಾದ ಆದಾಯ ಕೂತು ಕಡಿಮೆ ಇದ್ದರೆ ಏನಾಯಿತು ಕೊಡುತ್ತಾರೆ. ಆದರೆ ವ್ಯಾಪಾರದ ತೆರಿಗೆ ವಿಚಾರದಲ್ಲಿ

(ಶ್ರೀ ಎಚ್. ಬಿ. ಗುಂಡಪ್ಪಗೌಡರು.)

ಹಾಗಲ್ಲ, ಎಲ್ಲಾ ತರಹ ವ್ಯಾಪಾರ ಮಾಡುವವರೂ ಸೇರುತ್ತಾರೆ. ನಾಳೆ ನಾವು ಸಿವಿಲ್ ಕೋರ್ಟಿಗೆ ಕೇಸು ಹಾಕಬೇಕಾದ ಕಾಲ ಬಂದರೆ ಆಗ, ಆಗಲೇ ಒಬ್ಬ ಮಹನೀಯರು ಹೇಳಿದ ಹಾಗೆ ಇವತ್ತು ಅಂಡಿ ಒಬ್ಬನ ಹೆಸರಿನಲ್ಲಿರುತ್ತದೆ. ಮಾರನೆ ದಿನ ಅದನ್ನು ಬೇರೆಯವರಿಗೆ ವರ್ಗ ಮಾಡಿ ಹೊರಟು ಹೋದರೆ ಮುಂದೆ ಮಾಡುವುದೇನು ಎಂಬ ಪ್ರಶ್ನೆ ಹುಟ್ಟುತ್ತದೆ. ಟ್ಯಾಕ್ಸ್ ಕೊಡುವವರು ಯಾರೇ ಆಗಲೀ ಸಂತೋಷದಿಂದ ಕೊಡುವುದಿಲ್ಲ. ಆ ರೀತಿ ಕೊಡುವ ಕಾಲ ಇನ್ನೂ ಬಹಳ ದೂರದಲ್ಲಿದೆ. ಎಲ್ಲರೂ ಸೇರಿಕೊಂಡು 100 ಕ್ಕೆ 90 ಭಾಗ ಸಂತೋಷದಿಂದ ಕೊಡುತ್ತೇವೆ ಎಂದು ಹೇಳುವ ಕಾಲ ಯಾವಾಗ ಬರುತ್ತದೆಯೋ ಭಗವಂತನಿಗೇ ಗೊತ್ತು. ಇದೆಲ್ಲಾ ಸ್ವಲ್ಪ ಆಲೋಚನೆ ಮಾಡಬೇಕು. ಹಲವಾರು ತರಹ ವ್ಯಾಪಾರಸ್ಥರು ಇರುತ್ತಾರೆ. ಹೆಚ್ಚು ಸಂಪಾದನೆ ಮಾಡಬೇಕೆಂದು ಕುತೂಹಲವಿರುತ್ತದೆ. ಅದರಲ್ಲಿ ತಪ್ಪೇನೂ ಇಲ್ಲ. ಇತರ ಕಂದಾಯ ವಸೂಲು ಮಾಡುವುದಕ್ಕೂ ಇದಕ್ಕೂ ವ್ಯತ್ಯಾಸವಿದೆ. ರೈತ ಕಂದಾಯ ಕೊಡದಿದ್ದರೆ, ಅವನ ಜಮೀನು ಇರುತ್ತದೆ. ನೋಟೀಸ್ ಕೊಡುತ್ತಾರೆ ವಸೂಲು ಮಾಡಿಕೊಳ್ಳುತ್ತಾರೆ. ಲ್ಯವನೇನೂ ಜಮೀನನ್ನು ಕದ್ದುಕೊಂಡು ಹೋಗುವ ಹಾಗಿಲ್ಲ. ಆದ್ದರಿಂದ ಆ ಪ್ರೊಸೀಜರ್‌ಗೂ ಈ ಪ್ರೊಸೀಜರ್‌ಗೂ ಸರಿಹೋಗುವುದಿಲ್ಲ. ಸರ್ಕಾರದವರಿಗೆ ಸುಲಭವಾಗಿ ಹಣ ವಸೂಲಾಗುವ ಹಾಗೆ ಇರಬೇಕು. ಇದನ್ನೆಲ್ಲಾ ಯೋಚನೆ ಮಾಡಿ ಅನೇಕ ಮಹನೀಯರು ಮಾತನಾಡಿದ್ದಾರೆ. ಬಿಡಿಸಿ ಹೇಳಬೇಕಾಗಿಲ್ಲ. ಸರ್ಕಾರದವರನ್ನು ನಂಬದ ಮೇರೆ ಇನ್ನಾರನ್ನು ನಂಬುತ್ತಾರೋ ಗೊತ್ತಿಲ್ಲ. The highest appellate authority is Government ಎಂದು ಹೇಳುತ್ತೇವೆ. ಸರ್ಕಾರಕ್ಕೂ ಹೋಗಬಹುದು, ತೊಂದರೆ ಇಲ್ಲ. ಹೈಕೋರ್ಟಿಗೂ ಹೋಗಬಹುದು. ಇಮಾಂರವರ ಮನಸ್ಸಿನಲ್ಲಿ ಏನಿದೆಯೋ ಅರ್ಥವಾಗಿಲ್ಲ. ಅವರಿಗೆ ತೋರದೇ ಇರುವುದು ಏನೋ ಗೊತ್ತಾದರೆ I would have tried to satisfy my friend. ಅವರಿಗೆ ಏನು ಹೆದರಿಕೆ ಬಂದಿದೆಯೋ ನನಗೆ ಗೊತ್ತಾಗಿಲ್ಲ.

Janab J. MOHAMED IMAM.—Indiscriminate prosecution and denial of remedies.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆ ರೀತಿ ಏನೂ ಆಗಿಲ್ಲ. ಅವಕ್ಕೆ ಬೇಕಾದಷ್ಟು ನಿವಾರಣೆಗಳಿವೆ. ಕೆಲಗೆ ಸುಮೂತ್ರವಾಗಿ ವಸೂಲಾಗಬೇಕಾಗಿದ್ದರೆ ಸರಿಯಾದ ಪ್ರೊಸೀಜರ್ ಇಲ್ಲದೆ ಆಗುವುದಿಲ್ಲ. ಆದ್ದರಿಂದ ನಾನು ಹೇಳುವುದು ಇಷ್ಟೆ. ಯಾವ ರೀತಿಯಲ್ಲಾದರೂ ಇದು ಜನಗಳಿಗೆ ಅನ್ಯಾಯವಾಗುವುದಾಗಿದ್ದಿದ್ದರೆ ಇದಕ್ಕೆ ಅಡ್ಡಿ ಮಾಡಬಹುದಾಗಿತ್ತು. ಆದರೆ ಇದು ಇದ್ದದ್ದರಲ್ಲಿ ನ್ಯಾಯವಾಗಿದೆ ಎಂದು ತಿಳಿದುಕೊಂಡು ನಾವು ... .

ಶ್ರೀ ಎಲ್. ಸಿದ್ದಪ್ಪನವರು.—ನಿಮಗೆ ನಾವು ಸಮಾಧಾನ ಕೊಡುತ್ತೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಮಗೆ ತಿಳಿದ ಮಟ್ಟಿಗೆ ಇದರಿಂದ ಈಗ ತೊಂದರೆಯೇನೂ ಇಲ್ಲ. ವಸೂಲೀ ಕ್ರಮ ಸುಲಭವಾಗಬೇಕು. ಯಾವ ಸರ್ಕಾರವೇ ಆಗಲಿ, ವಸೂಲಾಗಬೇಕಾದ ಹಣ ವಸೂಲಾಗದಿದ್ದರೆ ಯಾವ ಉದ್ದೇಶ ನೆರವೇರುತ್ತದೆ?

ಹಾಗಿದ್ದರೆ ಈ ವಿರೋಧಗಳನ್ನು ಸೇಲ್ಸ್‌ಟ್ಯಾಕ್ಸ್ ಮಸೂದೆ ಮೊದಲು ಸಭೆಯ ಮುಂದೆ ಬಂದಾಗಲೇ ತರಬಹುದಾಗಿತ್ತು. ಅಲ್ಲದೆ ಈ ಅಂಶಗಳನ್ನೆಲ್ಲಾ ಯೋಚನೆ ಮಾಡಿಯೇ ನಾವೀಗ ಈ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಮುಖ್ಯವಾಗಿ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದ್ದೇ ಹೊರತು ಮತ್ತೇನೂ ಅಲ್ಲ. ಅಷ್ಟೇಕೆ, ಮಾನ್ಯ ಸದಸ್ಯರು ಮುನಿಸಿಪಲ್ ಆಕ್ಟನ್ನು ನೋಡುವುದಾದರೆ, ಅದರಲ್ಲಿ ಮುನಿಸಿಪಲ್ ಕಂದಾಯವನ್ನು ಕೊಡದೆ ಹೋದರೆ ಜಪ್ತಿ ವಾರಂಟ್ (distraint warrant) ಸಹಾ ಕೊಟ್ಟು ವಸೂಲು ಮಾಡುವುದು. ಹಾಗೆ ಕೊಡದೆ ಹೋದರೆ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಹೋಗಿ ವಸೂಲು ಮಾಡುವುದು—ಇಂಥಾ ಅವಕಾಶವನ್ನು ಮಾಡಿಕೊಟ್ಟಿಲ್ಲವೇ!

ಶ್ರೀ ಎಲ್. ಸಿದ್ದಪ್ಪನವರು.—ಹೌದು. ಆ ಮಸೂದೆ ಸಭೆಯ ಮುಂದೆ ಬಂದಿತ್ತು, ಮತ್ತು ಅದನ್ನು ನಾನೂ ಅನುಮೋದಿಸಿದ್ದೇನೆ. ಆದರೂ .. ..

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅಂದ ಮೇಲೆ ಒಂದು ಮುನಿಸಿಪಲ್ ಆಕ್ಟಿನ ಪ್ರಕಾರ ಕೇವಲ ಮನೆ ಗಂದಾಯ ವಸೂಲು ಮಾಡುವುದಕ್ಕೂ ಈ ಅಧಿಕಾರವನ್ನು ಕೊಡುವುದಕ್ಕೆ ಒಪ್ಪಿರುವಾಗ ಈ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಹೀಗೆ ಪ್ರತಿಭಟನೆಯನ್ನೆತ್ತಿದರೆ, ನಾವು ಎಗ್ಸಿಕ್ಯೂಟಿವ್ ಅಧಿಕಾರಿಗಳಿಗೆ ಏನು ಸಹಾಯ ಮಾಡಿದ ಹಾಗಾಯಿತು! ಆದ್ದರಿಂದ ಈ ತಿದ್ದುಪಡಿ ಮುಖ್ಯವಾಗಿ ಆ ದೃಷ್ಟಿಯಿಂದ ತಂದಿರುವುದಾಗಿದೆಯೆಂದು ಭಾವಿಸಿ ನಾವು ಸೆಲಕ್ಟ್ ಕಮಿಟಿಯವರು ಒಪ್ಪಿಗೆ ಕೊಟ್ಟಿದ್ದೇವೆ. ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರುಗಳು ಒಪ್ಪಬಹುದೆಂದು ನಂಬಿದ್ದೇನೆ. ಇದರ ಮೇರೆ ಮಾನ್ಯ ಸಿದ್ದಪ್ಪನವರು ಏನು ಹೇಳುತ್ತಾರೋ ನೋಡೋಣ.

Sri G. A. ACHARYA (Bangalore District—General).—Sir, five Hon'ble Members who have spoken about this are all lawyers and rather I hesitate to speak much on this subject. All that I would say about the first, *i.e.*, reciprocity is, it is essential that the sales-tax and income-tax authorities must have due co-operation because the income-tax authorities will require the information as to what exactly the assessee has paid by way of sales-tax. Because the sales-tax more or less determines the sales and the profit can only be known when the sales are looked into. So, it is very essential. There is nothing wrong in our giving information in regard to sales-tax to the officers of Income-tax. The sales-tax is a new tax introduced in the State. Government must have known by now what are all the difficulties they have to face. Whether we like the sales-tax or not, it has come to stay and I opine that in the future years, perhaps in the

revenues of the State, Sales-tax will occupy, if I may say so, the first or second place. I have gone through the Bill. There are about five stages before the question is taken to the Magistrate Court and the assessee goes there. When Janab Imam spoke, he wanted somehow or other to take me very near him but unfortunately he is not here Anyway, I am not going to refer to that. In respect of the sales-tax, Sir, we have got to go and tender what account we have got to give. We are asked to go to a particular department and in a particular area and we have got to voluntarily give them the account of turn-over and we have to pay the tax on it. If there is anything wrong it would be pointed out. The second stage is, he can get his wrong corrected. In the third stage he can go to the Commissioner of the Sales-tax. Then there is the Government. He has also got an opportunity to go to the High Court on a point of law. Generally businessmen are most law-abiding. Business people, 99 per cent of them, tender their accounts and pay whatever tax is due from them. So, as regards Janab Imam's comments, I would refrain from going into that topic because lawyers can take care of this and our Finance Minister can see what exactly the matter is. From the revenue point of view also this measure is essential and this House should support it because, as I have already stated, sales-tax revenue will form the first or second item in the revenues of the State in future. With these words, I support the Select Committee Report.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಮಾನ್ಯ "ಧ್ಯಕ್ಷರೇ, ಇದನ್ನು ಸ್ವಾಗತಿಸಿ ತ್ತಾ ನಾನೂ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ಮಸೂದೆ ಮೊಟ್ಟಮೊದಲನೆಯದಾಗಿ ಸೆಲೆಕ್ಟ್‌ಸಮಿತಿಗೆ ಹೋಗಿದ್ದಾಗ್ಗೆ ನಾನೂ ಆ ಸಮಿತಿಯ ಸದಸ್ಯನಾಗಿದ್ದೆ. ಆಗಲೇ ಈ ತಿದ್ದುಪಡಿಯನ್ನು ಆ ಮಸೂದೆಯಲ್ಲಿ ಸೇರಿಸಿ ಸಮಿತಿಯ ಮುಂದಿಟ್ಟಿದ್ದರು. ಆ ಸಂದರ್ಭದಲ್ಲಿ ನಾನೇ ಇದನ್ನು ತೀವ್ರವಾಗಿ ಪ್ರತಿಭಟಿಸಿದ್ದೆ. ಆದರೆ ಈಚೆಗೆ ದೀರ್ಘವಾಗಿ ಆಲೋಚನೆ ಮಾಡಿದ ನಂತರ ಈ ತಿದ್ದುಪಡಿಯು ನಿಜವಾಗಿಯೂ ಅವಶ್ಯಕವೆಂಬ ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ. ಏಕೆಂದರೆ, ಈಗಿರುವ ಸೇಲ್ಸ್‌ಟ್ಯಾಕ್ಸ್ ಆಕ್ಟಿನ ಪ್ರಕಾರ ತೆರಿಗೆಯನ್ನು ಸೇಲ್ಸ್ ಟ್ಯಾಕ್ಸ್‌ಆಫೀಸರು ವಿಧಿಸುತ್ತಾರೆ. ಅವರ ತೀರ್ಮಾನದ ಮೇಲೆ ಸೇಲ್ಸ್‌ಟ್ಯಾಕ್ಸ್ ಡೆಪ್ಯುಟಿ ಕಮಿಷನರಿಗೆ ಅಪೀಲ್ ಹೋಗಬಹುದು. ಅವರ ತೀರ್ಮಾನದ ಮೇಲೆ ಕಮಿಷನರವರಿಗೆ ಅಪೀಲಿಗೆ ಅವಕಾಶವಿದೆ. ಅದರ ಮೇಲೆ ಸರ್ಕಾರಕ್ಕೂ ಕೂಡ ಒಂದು ರಿವಿಜಿ ಅರ್ಜಿ ದಾಖಲು ಮಾಡಲು ಅವಕಾಶವಿದೆ. ಇಷ್ಟೆಲ್ಲಾ ಅನುಕೂಲಾವಕಾಶಗಳನ್ನು ಮಾಡಿ ಕೊಟ್ಟ ಮೇಲೂ ಜನಾಬ್ ಇಮಾಂಸಾಹೆಬರು ವಾದವೇನಿತ್ತೆಂದರೆ ಬಾಕಿ ಎಲ್ಲಾ ಸಂದರ್ಭಗಳಲ್ಲಿ ಈ ತೀರ್ಮಾನವು ಅಖೈರಾಗಿರುತ್ತದೆ. ಆದರೆ ಕ್ರಿಮಿನಲ್ ಕೋರ್ಟಿಗೆ ಹೋದ ಮಾತ್ರಕ್ಕೆ ಆ ತೀರ್ಮಾನವೇ ಅಖೈರಾಗಕೂಡದು, That order shall not be final ಎಂಬ ಈ ವಾಧಸರಣಿ ನಗರ್ಭವಾಗುವುದಿಲ್ಲ. ತೆರಿಗೆ ಕೊಡಬೇಕಾಗಿರುವುದರ ಮೇಲೆ ಪ್ರಾಸಿಕೂರ್ಷ ಮಾಡಿದರೆ, ಅವರ ತೀರ್ಮಾನವೇಕೆ ಅಖೈರಾಗಕೂಡದೆಂಬ ಪ್ರಶ್ನೆಯನ್ನು ನನ್ನ ಮಿತ್ರರಿಗೆ ಕೇಳುತ್ತೇನೆ.

This is not a novel procedure adopted for the first time for the collection of tax. It is found in several Acts like the Corporation Act and several Municipal laws. Therefore this is not a novel procedure and the assessee will not be prejudiced in any way by being prosecuted in a court of law. The only suggestion I wish to make is that there should not be indiscriminate prosecution. Prosecution should not be launched unless the assesse evades payment of tax and there is no other way of recovering the tax, either by warrant or by other method. Janab Imam said that people should not be prosecuted if they are not able to pay the tax. But here non-payment of the tax is the only offence for which he must show that he has paid the tax or he has satisfied the demand. It is a welcome measure and I heartily support it.

ಶ್ರೀ ಎಸ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿರತಕ್ಕ ಮಸೂದಾಕಾನೂನಿನಲ್ಲಿ ಅಡಕವಾಗಿರತಕ್ಕ ಕೆಲವು ವಿಷಯಗಳನ್ನು ಮಾನ್ಯ ಸದಸ್ಯರು ಆಷ್ಟು ದೀರ್ಘವಾಗಿ, ಕೂಲಂಕಷವಾಗಿ ಪರಿಶೀಲಿಸಲ್ಲವೆಂದು ನನ್ನ ಅಭಿಪ್ರಾಯ.

ಈಗ ಈ ಸಭೆಯ ಮುಂದಿರುವ ಮಸೂದೆಯ ಒಂದನೆಯ ಭಾಗ ಅಂದರೆ 24ನೇ ಸೆಕ್ಷನ್, 3ನೇ ಷೆಡ್ಯೂಂ, ರೆಸಿಪ್ರೋಕಲ್ ಭಾಗದ ಬಗ್ಗೆ ಯಾರೂ ಭಿನ್ನಾಭಿಪ್ರಾಯವಿಲ್ಲ.

ಇನ್ನು ಎರಡನೆಯದಾಗಿ ಕಾನೂನಿನಲ್ಲಿ ಅಡಕವಾಗಿರುವ 22ನೆಯ ಸೆಕ್ಷನ್, 2ನೇ ಷೆಡ್ಯೂಂ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಅರಿಕೆ ಮಾಡುತ್ತೇನೆ.

ಇದನ್ನೂ ಮತ್ತು ಇದಕ್ಕೆ ತಂದಿರತಕ್ಕ ತಿದ್ದುಪಡಿಯನ್ನೂ ಒಪ್ಪತಕ್ಕ ವಿಚಾರದಲ್ಲಿ ನನ್ನದು ಸ್ವಲ್ಪ ಭಿನ್ನಾಭಿಪ್ರಾಯವಿದೆ. ಆದರೆ ಮಾನ್ಯ ಸದಸ್ಯರು ಕೆಲವರು ವಾದಮಾಡಬಹುದು. ಇದು ಅವಶ್ಯಕವಾಮದ್ದು, ಈ ಕಾನೂನು ಇದ್ದರೇ ಮಾರಾಟ ತೆರಿಗೆಯನ್ನು ವಸೂಲು ಮಾಡಲು ಅನುಕೂಲವಾಗುತ್ತೆ, ಇಲ್ಲದಿದ್ದರೆ ಸಾಧ್ಯವಾಗುವುದೇ ಇಲ್ಲ. ಆದಕಾರಣ ಇದು ಇರತಕ್ಕದ್ದು

(ಶ್ರೀ ಎಲ್. ಸಿದ್ದಪ್ಪನವರು.)

ಕೆಲವು ಆಗತ್ಯ ಮತ್ತು ಅವಶ್ಯಕ ಎಂದು. ಆದರೆ ನಾನು ಹೇಳತಕ್ಕದ್ದು ಹಾಗೆ ವಸೂಲು ಮಾಡಲು ಒಂದೇ ಮಾರ್ಗವಲ್ಲ. ಅದಕ್ಕೆ ನಾನಾ ಮಾರ್ಗಗಳಿವೆ. ಡಿಸ್ಟ್ರೆಂಟ್ ವಾರಂಟ್ ಹಾಕ್ಕಿಸಿ ಬಾಕಿ ವಸೂಲು ಮಾಡಲು ಅವಕಾಶವಿದೆ ಆದರೆ ಈ ಕಾನೂನಿನಲ್ಲಿ ಅದಕ್ಕೆ ಅವಕಾಶವಿದೆಯೋ ಅಥವಾ ಇಲ್ಲವೋ ನನಗೆ ತಿಳಿಯದು. ಬಾಕಿ ತೆರಿಗೆ ಕೊಡದಿರತಕ್ಕಂಥ ಮನುಷ್ಯನ ಪ್ರಾಪರ್ಟಿಯನ್ನು ರದ್ದುಪಡಿಸುವುದರ ಮೂಲಕ ಬಾಕಿಯನ್ನು ವಸೂಲು ಮಾಡಲು ಅವಕಾಶವಿದೆ, ಮತ್ತು 2 ನೇ ಸೆಕ್ಷನ್ ರೀತ್ಯ ಜೀಕಾದರೆ ಅವರನ್ನು ಪ್ರಾಸಿಕ್ಯೂಟ್ ಜೀಕಾಗಿದ್ದರೂ ಮಾಡಬಹುದು. ಅದಕ್ಕೆ ನನ್ನ ಅಭ್ಯಂತರವಿಲ್ಲ. ಒಂದಾವತಿ ಒಬ್ಬ ಮನುಷ್ಯನು ತಾನು ಕೊಡಬೇಕಾದ ತೆರಿಗೆಯನ್ನು ಕೊಡದೆ ಸೋಗಿದ್ದು ಆ ಬಗ್ಗೆ ವ ಚಾರಣೆಯಾಗಿರತಕ್ಕ ಬಾಕಿಗಾಗಿ ಅತನಿಗೆ ವಾರಂಟ್ ತಲುಪಿದ ಮೇಲೂ ಆತ ಕೊಡಬೇಕಾದ ಬಾಕಿಯನ್ನು ಪಾವತಿ ಮಾಡದೆ ಹೋದಲ್ಲಿ ಅಂಥವನ ವಿಷಯದಲ್ಲಿ ಅವರನ್ನು ಪ್ರಾಸಿಕ್ಯೂಟ್ ಮಾಡತಕ್ಕದ್ದೆಂದು ಹೇಳುವುದಾದರೆ ಅದಕ್ಕೂ ನನ್ನ ಅಭ್ಯಂತರವಿಲ್ಲ ತೆರಿಗೆ ಕೊಡಲು ಉದ್ದೇಶ ಪೂರ್ವಕವಾಗಿ ತಪ್ಪಿಸಿಕೊಳ್ಳಬೇಕೆಂಬ ಪ್ರಯತ್ನ ಎಂಬತಕ್ಕದ್ದರ ಮೇಲೆ ಕ್ರಿಮಿನಲ್ ಕೋರ್ಟಿನಲ್ಲಿ ಮೊಕದ್ದಮೆ ಹಾಕುವುದೂ ಒಳ್ಳೆಯದೆ.

ರಾಜಮಂತ್ರಿ ಪ್ರವೀಣ ಎಚ್. ಬಿ. ಗುಂಡಪ್ಪ ಗೌಡರು.—ಅದನ್ನು ಸೆಕ್ಷನ್‌ನಲ್ಲಿ ಡಿಫೈನ್ ಮಾಡಲಾಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಸೆಕ್ಷನ್‌ನಲ್ಲಿ ಡಿಫೈನ್ ಮಾಡಿರುವುದು ಈ ರೀತಿ ಇದೆ.—

"Save as provided in Section 16, no assessment made and no order passed under this Act or the rules made thereunder by any assessing authority shall be called in question in any Civil Court and save as is provided in sections 14 and 15 no appeal or application for revision shall lie against any such assessment or order."

ಹಾಗೆ ಆಕ್ಷೇಪ ಮಾಡಿಲ್ಲವೇದು ಹೇಳುವುದಕ್ಕೆ ಒಂದು ವೇಳೆ ಅತನಿಗೆ ನ್ಯಾಯವಾದ ಕಾರಣಗಳಿದ್ದರೆ ಅವನು ಕೋರ್ಟಿನಲ್ಲಿ ಆ ಬಗ್ಗೆ ತನ್ನ ಡಿಫೆನ್ಸಿಗೆ ಅನುಕೂಲವಾಗುವಂತೆ ವಾದಿಸಲೇ ಬಾರದೆಂದು ಈ ನಿಯಮದಲ್ಲಿ ಹೇಳಿರತಕ್ಕದ್ದು ಮೂಲಭೂತ ಹಕ್ಕಿಗೇ ತೀರಾ ವಿರೋಧವಾಗಿದೆ. ಕಾನೂನಿನಲ್ಲಿ ಡಿಫೆನ್ಸಿಗೆ ಅವಕಾಶವಿದೆ. ಅದನ್ನು ಅವನು ಕೇಳುವ ಅವಕಾಶ ಕೊಡಬೇಕು. ಆ ರೀತಿ ಅತನು ವಾದಿಸಲೇಬಾರದೆಂದು ಇಲ್ಲಿ ನಿರ್ಬಂಧ ಮಾಡಿರುವುದು ಸರಿಯಾಗಿದೆ. ಸೇಲ್ಸ್ ಟ್ಯಾಕ್ಸ್ ಕೊಡಲು ನಿರಾಕರಿಸಿದವನ ಮೇಲೆ ಕೇಸ್ ಹಾಕಿ ಅದನ್ನು ವಸೂಲು ಮಾಡಿಕೊಳ್ಳಲು ಬೇಕಾದಷ್ಟು ಅವಕಾಶವಿದೆ. ಒಂದು ಕೋರ್ಟಿನಲ್ಲಿ ಪಾರ್ಟಿಗೆ ಅನುಕೂಲವಾದರೆ ಅದರ ಮೇಲೆ ಮತ್ತೊಂದು ಕೋರ್ಟಿಗೆ ಅಪೀಲ್ ಹಾಕಬಹುದು. ಅದರ ಮೇಲೂ ಕಡೆಗೆ ಸರ್ಕಾರದಲ್ಲಿ ರಿವಿಜ಼ನ್ ಅರ್ಜಿ ಹಾಕಿಕೊಳ್ಳಬಹುದು. ಪಾರ್ಟಿಗೆ ತಾನು ತನ್ನ ಡಿಫೆನ್ಸ್ ಬಗ್ಗೆ ವಾದ ಮಾಡಕೂಡದೆಂದು ಹೇಳುವುದು ಕಾನೂನಿಗೂ ಮತ್ತು ಮೂಲಭೂತ ಹಕ್ಕುಗಳಿಗೂ ತೀರಾ ವಿರೋಧವಾಗಿದೆಯೆಂದು ನಾನು ತಿಳಿಸಬೇಕಾಗಿದೆ.

ಈ ಹಿಂದೆ ಅಂದರೆ ಬಹುಶಃ 1919ನೆಯ ಜೂಡಿಷಿಯೇಶನದಲ್ಲೋ ಅಥವಾ ದಶರಾಧಿವೇಶನದಲ್ಲೋ ಈ ಸಭೆಯು ಮುಂದೆ ಸಿಟಿ ಮುನಿಸಿಪಾಲಿಟಿ ಆಕ್ಟ್ ತಿದ್ದುಪಡಿ ಮಾಡಲು ಒಂದು ಮಸೂದಾಕಾನೂನು ತಂದಿದ್ದಾಗ ಯಾರಾದರೂ ತೆರಿಗೆಯನ್ನು ಕೊಡಲು ನಿರಾಕರಿಸಿದರೆ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟರೆ ಅಂಥವನ ಮೇಲೆ ಪ್ರಾಸಿಕ್ಯೂಷನ್ ಹಾಕಬೇಕೆಂದು ಅದರಲ್ಲಿ ಪೀನಲ್ ಕ್ಲಾಸ್ ಸೇರಿದ್ದುದಕ್ಕೆ ಇದೇ ರೀತಿ ಆದನ್ನು ಪುಷ್ಟೀಕರಿಸಿ ವಾದಮಾಡಿದ್ದೇನೆ. ಆಂದರೆ ಇದರಲ್ಲಿಯೂ ಸಹ ಆ ರೀತಿ ಪೀನಲ್ ಕ್ಲಾಜ್ ಇರಕೂಡದೆಂದು ನಾನು ಹೇಳುತ್ತಿಲ್ಲ ಮತ್ತು ಹಾಗೆ ಇರಬಾರದನ್ನು ನಾನು ವಿರೋಧಿಸುತ್ತಿಲ್ಲ. ಏತಕ್ಕೆಂದರೆ ಜನರಲ್ಲಿ ಎಲ್ಲಾ ತರಹೆಯ ಜನಗಳೂ ಇದ್ದಾರೆಂಬ ಅರಿವು ನನಗೂ ಗೊತ್ತಿದೆ. ಮೊಂಡರಿಗೆ ತಕ್ಕ ಪ್ರಾಯಶ್ಚಿತವಾಗಬೇಕಾಗಬೇಕು. ಅದಕ್ಕೆ ತಕ್ಕ ಸೆಕ್ಷನ್ ಇದ್ದೇ ಇದೆ. ಆದರೆ ಡಿಫೆನ್ಸ್ ಇರತಕ್ಕ ಮನುಷ್ಯನೂ ಕೂಡ, ಅದನ್ನು ಉಪಯೋಗಿಸಿಕೊಳ್ಳಬಾರದೆಂದು ನಿರ್ಬಂಧ ಹಾಕುವುದು ನ್ಯಾಯವಾಗುವುದಿಲ್ಲ. ನ್ಯಾಯಾಸ್ಥಾನಕ್ಕೆ ಹೋದ ಬಳಿಕ ನ್ಯಾಯವಾಗಿ ತೀರ್ಪುಕೊಡಲು ಸರಿಯಾದ ಅವಕಾಶಗಳನ್ನು ಕಲ್ಪಿಸತಕ್ಕದ್ದು ನ್ಯಾಯ. ಯಾರು ಪ್ರಾಸಿಕ್ಯೂಟ್ ಮಾಡುತ್ತಾರೋ, ಅದನ್ನು ರುಜುವಾತುಪಡಿಸತಕ್ಕದ್ದು ಅವರ ಕರ್ತವ್ಯ. ಹಾಗೆ ಸಾಕಷ್ಟು ರುಜುವಾತು ಕೊಟ್ಟಲ್ಲಿ ಕೋರ್ಟು ಅತನಿಗೆ ಶಿಕ್ಷೆಯನ್ನು ಕೊಟ್ಟೇಕೊಡುತ್ತದೆ.

Sri S. RANGARAMIAH (Mysore District—General).—Assessment alone will be the evidence.

Sri L. SIDDAPPA.—If a person is accused of an offence and he pleads that he is not liable to pay the tax and if the prosecution proves that he is liable to pay the tax, then the plea of the accused will be rejected by the Court and the accused will be convicted. But why should that provision say that no such plea is open to him in a Criminal Court? That is the thing about which I have my own doubts. I am definite about it, that we are going too far in this direction to make it impossible for an accused to put forward any defence or plea that is open to him. So in this view of the matter, I oppose this provision in the Bill before us.

ಶ್ರೀ ಎಸ್. ರಂಗರಾಮಯ್ಯನವರು.—ಸ್ವಾಮಿ, ಈ ರಿಪೋರ್ಟನ್ನು ನಾನು ಮೊದಲು ಸ್ಥೂಲವಾಗಿ ಓದಿದಂಥಾ ಕಾಲದಲ್ಲಿ ನನ್ನ ಮಾನ್ಯ ಸ್ನೇಹಿತರಾದ ಶ್ರೀ ಎಲ್. ಸಿದ್ದಪ್ಪನವರು ಮತ್ತು ಜನಾಬ್ ಇಮಾಂರವರು ಏನು ಶಂಕೆಗಳನ್ನಿಟ್ಟುಕೊಂಡಿದ್ದರೋ, ಅದೇ ಶಂಕೆಗಳು ನನಗೂ ಹುಟ್ಟಿದ್ದವು. ನಾನು ಮಾನ್ಯ ಮಂತ್ರಿಗಳಲ್ಲಿ ಹೋಗಿ ಆ ಬಗ್ಗೆ ಚರ್ಚೆ ಮಾಡಿದನಂತರ, ಅವರು ನನಗೆ ವಿವರಣೆ ಕೊಟ್ಟ ಬಳಿಕ ಈ ಸೆಕ್ಷನ್ ಕಾನೂನಿನಲ್ಲಿ ರತಕ್ಕದ್ದು ಅಗತ್ಯವಾಗಿದೆಯೆಂದು ತಿಳಿದು ಬಂತು. ನಮ್ಮ ಮುಂದಿರತಕ್ಕ ಕಾನೂನಿನಲ್ಲಿ ಕೆಲವು ಬಾಬುಗಳಲ್ಲಿ ಕೆಲವರು ಭಾವಿಸಿದಂತೆ ಬೇರೆ ಅರ್ಥಮಾಡಿಕೊಳ್ಳಲು ಅವಕಾಶವಿದೆ. ಆದರೆ ಈಗ ತಾನೆ ಮಾತನಾಡಿದ ಮಾನ್ಯಸದಸ್ಯರು ಕೇಳಿದ್ದೇನೆಂದರೆ ಡಿಫಾಲ್ಟರ್ ಆಗಿರತಕ್ಕವನು ತನಗೆ ನ್ಯಾಯವಾದ ಕಾರಣಗಳಿದ್ದಲ್ಲಿ ಆ ಬಗ್ಗೆ ತನ್ನ ಡಿಫೆನ್ಸ್‌ಗಾಗಿ ಅವುಗಳ ಉಪಯೋಗ

ಕಲ್ಪಿಸಿಕೊಳ್ಳಬಾರದೆಂದು ಹೇಳಿರತಕ್ಕದ್ದು ಕೇವಲ ಮೂಲ ಭೂತ ಹಕ್ಕುಗಳಿಗೆ ವಿರೋಧವಾಗಿದೆ ಎಂದು. ನನ್ನ ಅಭಿಪ್ರಾಯದಲ್ಲಿ ಇದನ್ನು ಎರಡು ದೃಷ್ಟಿಯಿಂದ ನೋಡಬೇಕಾಗಿದೆ. ಟ್ಯಾಕ್ಸ್ ವಿಧಾಯಕವಾದ ನಂತರ ಅದು ನ್ಯಾಯವೇ ಅಲ್ಲವೇ ಎಂಬ ಬಗ್ಗೆ ನಿರ್ಧರಿಸಿಕೊಳ್ಳಲು ಪಾರ್ಟಿಗೆ ಹೈಕೋರ್ಟಿನತನಕ ಬಾದ ಹೂಡಲು ಅವಕಾಶ ಕಲ್ಪಿಸಿಕೊಡಲಾಗಿದೆ. ಹಾಗೆ ಅವಕಾಶ ಕೊಟ್ಟು ತೆರಿಗೆ ಹಾಕಿರುವುದು ನ್ಯಾಯವಾದ್ದೆಂದು ನಿರ್ಧರಿಸಿದ ಬಳಿಕ ಅಂಥಾ ತೆರಿಗೆಯನ್ನು ಆತ ಕೊಡಲು ಇಷ್ಟವಿಲ್ಲದೆ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಆಗ ಅತನ ಮೇಲೆ ಮತ್ತೆ ಡಿಫಾಲ್ಟರಾಗಿ ಕೇಸ್ ಹಾಕಲಾಗುತ್ತದೆ. ಹಿಂದೆಯೇ ಒಂದಾವರ್ತಿ ಕೋರ್ಟು ತೀರ್ಮಾನ ಮಾಡಿಸಿದ್ದನ್ನು ಮತ್ತೆ ಕ್ರಿಮಿನಲ್ ಕೋರ್ಟಿಗೆ ತೆಗೆದುಕೊಂಡು ಹೋದಾಗ ಪಾರ್ಟಿಯವಾದ ಹೂಡಲು ಏನು ಕಾರಣಗಳನ್ನು ತೋರಿಸಬೇಕು? ಅಬ್ಬೇರು ಕೋರ್ಟೇ ಸದ್ರಿ ಮನುಷ್ಯ ಇಷ್ಟೇ ತೆರಿಗೆ ಕೊಡಲೇಬೇಕೆಂದು ನಿರ್ಧರಿಸಿದ ಮೇಲೂ ಪಾರ್ಟಿಗೆ ತನ್ನನ್ನು ದಿಫೆಂಡ್ ಮಾಡಿಕೊಳ್ಳಲು ಯಾವ ಅವಕಾಶ ತಾನೆ ಇದೆ? ನಾವು ಇದನ್ನು ಈಗ ಮುಖ್ಯವಾಗಿ ಆಲೋಚನೆ ಮಾಡಬೇಕಾಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಹಾಗಿದ್ದಲ್ಲಿ ಇದನ್ನು ಕಾನೂನಿನಲ್ಲೂ ಬಿಟ್ಟೇ ಬಿಡಿ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಅವಕಾಶ ಕೊಟ್ಟರೆ ಪುನಃ ಅದೇ ಪ್ರಕಾರ ಹಾಡಿದ್ದನ್ನೇ ಹಾಡಲು ಅವಕಾಶವಾಗಿ ವೃಥಾ ಕಾಲಹರಣವೆಂದಾಗುತ್ತದೆ. ಅಂಥಾ ಕಾರಣಗಳೇ ಅತನಿಗೆ ಇರುವುದಿಲ್ಲ. ಯಾವ ಯಾವ ಸಂದರ್ಭದಲ್ಲಿ ಹೇಗೆ ಚರ್ಚಾಯಿಸಬೇಕೆಂಬುದಕ್ಕೆಲ್ಲಾ ಕಾನೂನಿನಲ್ಲಿ ಅವಕಾಶ ಕೊಡಲಾಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಪ್ರಾಸಿಕ್ಯೂಷನ್ ರಿಪೋರ್ಟು ಹಾಕಿದನಂತರ ಕೋರ್ಟಿಗೆ ಏಕೆ ಕಳುಹಿಸುತ್ತೀರಿ? ನೀವಾ ಜೈಲಿಗೇ ಹೋಗಬೇಕೆಂದು ಹೇಳಿಬಿಡಿ.

ಶ್ರೀ ಎಸ್. ರಂಗರಾಮಯ್ಯನವರು.—ಸೇಲ್ಸ್ ಟ್ಯಾಕ್ಸ್ ಕಾನೂನು ಪ್ರಕಾರ ತೆರಿಗೆ ವಿಧಿಸಿಲ್ಲವೆಂದು ಹೇಳಬಹುದು ಮತ್ತು ಟ್ಯಾಕ್ಸು ಹಾಕಿರುವ ಪೋಸೀ ಜರು ಸರಿಯಿಲ್ಲವಾದ್ದರಿಂದ ಕಾನೂನು ಬದ್ಧವಲ್ಲವೆಂದು ಹೇಳಬಹುದು. ಆದರೆ ಈ ನಿಯಮವನ್ನು ಸರ್ವ ಸಾಮಾನ್ಯವಾಗಿ ಎಲ್ಲರ ಮೇಲೂ ಉಪಯೋಗಿಸಬೇಕೆಂದು ಮಾಡಿಲ್ಲ. ಆ ಬಗ್ಗೆ ಸಮಯ ಸೂಕ್ಷ್ಮಗಳನ್ನು ನೋಡಿ ಪ್ರಾಸಿಕ್ಯೂಷನ್ ಮಾಡಲಾಗುತ್ತದೆ. ಕೇವಲ ಮೊಂಡರಾದಂಥವರ ವಿಚಾರದಲ್ಲಿ ಮಾತ್ರ ಇದಕ್ಕೆ ಅವಕಾಶ ಸಿಕ್ಕಬಹುದು.

ಶ್ರೀ ಎಲ್. ಸಿದ್ದಪ್ಪನವರು ಹೇಳಿದ ಹಾಗೆ ಕೆಲವರು ಗಿರಾಕಿಗಳಿರುತ್ತಾರೆ. ಕೊಂಚೆ ಮಾರಾಟ ತೆರಿಗೆ ಕೊಟ್ಟರುತ್ತಾರೆ. ಆ ಮೇಲೆ ಅಪೀಲು ದಾಖಲುಮಾಡುತ್ತಾರೆ. ಆ ಮಧ್ಯದಲ್ಲಿ ಅವರ ಹಕ್ಕು ಭಾಧ್ಯತೆಯನ್ನು ಇನ್ನೊಬ್ಬರಿಗೆ ಮಾರಿ ಅವರು ಕೈತೊಳೆದುಕೊಂಡು ಬಿಟ್ಟರೆ ಆಗ ಅವರಿಗೆ ಇತರ ವಿಧವಾದ ಆಸ್ತಿ ಪಾಸ್ತಿಯಿಲ್ಲದಿದ್ದರೆ ಅಂಥವರಿಂದ ತೆರಿಗೆ ಹೇಗೆ ವಸೂಲು ಮಾಡುವುದು? ಆದ್ದರಿಂದ ಪ್ರಾಸಿಕ್ಯೂಷನ್ ಮಾಡಿದರೆ ಅವಕ್ಕೆ ಹೆದರಿ ಭಯದಿಂದ ಹಣ ಕೊಡುತ್ತಾರೆಂದು ಹೇಳುವುದಕ್ಕೆ ಅವಕಾಶವಿರುತ್ತದೆ. ಮತ್ತು ಇಂಥ ಕಾನೂನನ್ನು ಇನ್ಯಾವ ರೀತಿಯಲ್ಲೂ ಹಣ ವಸೂಲಾಗುವುದಿಲ್ಲವೆಂದು ತಿಳಿದರೆ ಆಗ ಮಾತ್ರ ಉಪಯೋಗಿಸುತ್ತಾರೆಯೇ ವಿನಾ ಏಕ್‌ದಂ ಪ್ರಯೋಗಿಸುವುದು ಬಹಳ ಅಪರೂಪ, ಮತ್ತು ಒಂದು ವೇಳೆ ಮೂರು ಕೋರ್ಟುಗಳಲ್ಲ ತೆರಿಗೆ ಇಷ್ಟು ಕೊಡಬೇಕೆಂದು ನಿರ್ಧಾರವಾಗಿರುವಾಗ ತೆರಿಗೆ ಕೊಡಬೇ ಇರುವವರ ಮೇಲೆ ಒತ್ತಾಯ ಉಪಯೋಗಿಸಲು ಒಂದು ಕಾನೂನನ್ನು ಇಟ್ಟು ಕೊಳ್ಳುವುದು ಸೂಕ್ತ. ಈಗಿನಮಗೆ ಬರಬೇಕಾದ ತೆರಿಗೆ ಸಹ ಕಡಮೆಯಾಗಿರುವಾಗ ಮಾರಾಟತೆರಿಗೆಯು ಬಹಳ ಮುಖ್ಯವಾಗಿರುವುದರಿಂದ ಅದನ್ನು ಸಂಸ್ಥಾನದ ಆದಾಯದ ಬಾಬಿನಲ್ಲಿ ಒಂದು ಅಂಶವಾಗಿ ಭಾವಿಸಬೇಕಾಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಪ್ರಾಸಿಕ್ಯೂಷನ್ ವಿಚಾರವಾಗಿ ಸ್ವಲ್ಪ ಅನುಮಾನವಿದೆ.

ಶ್ರೀ ಎಸ್. ರಂಗರಾಮಯ್ಯನವರು.—ತೆರಿಗೆ ವಸೂಲಿಗೆ ಮತ್ತು ರಕ್ಷಣೆಗೆ ಕಾನೂನು ಸರಿಯಾದ್ದು ಇರಬೇಕಾದ್ದು ಅವಶ್ಯಕ. ಈ ರೀತಿ ಕಾನೂನುಗಳಿಗೆ ಕೊಡಬೇಕಾದವರನ್ನು ಬದ್ಧಪಡಿಸುವುದಿಲ್ಲ ಎಂದು ಯೋಚನೆ ಮಾಡಿ ತೆರಿಗೆಯನ್ನು ಕೊಡಬೇಕಾಗಿಲ್ಲವೆಂದು ವರ್ಷಗಟ್ಟಲೆ ಎಳೆಯುವುದನ್ನು ಪ್ರತಿ ಬಂಧಕವಾಗಲು ಈ ರೀತಿಯಾದ ಕಾನೂನು ಸೂಕ್ತ ಎಂದು ತಂದಿರುವುದರಿಂದ ಈ ಮಸೂದೆಯನ್ನು ಅಂದರೆ ಸಮಿತಿಯು ವರದಿಯನ್ನು ಅನುಮೋದಿಸುತ್ತೇನೆ.

